# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/22/2015.16;

ದಿನಾಂಕ: 28.07.2016

| ವಾದಿ | ಪ್ರತಿವಾದಿ |
| --- | --- |
| ಆನಂದ ಎಸ್ ವೈ ತಂದೆ ಶಿವಪುತ್ರಪ್ಪ ಎತ್ತಿನಮನಿ<br>ಶಿವಾನಂದನಗರ ಗ್ರಾಮ, ಹಗರಿಬೊಮ್ಮನಹಳ್ಳಿ(ತಾ) | 1.ಉಲುವತ್ತಿ ಓಮಮ್ಮ ಗಂಡ ಹನುಮಪ್ಪ<br>2.ಯು ಗೋಣೆಪ್ಪ ತಂದೆ ಹನುಮಪ್ಪ<br>ಮುಟುಗನಹಳ್ಳಿ ಗ್ರಾಮ, ಹ.ಬೊ.ಹಳ್ಳಿ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಬ್ಯಾಸಿಗಿದೇರಿ ಗ್ರಾಮದ ಸರ್ವೆ ನಂ.401/ಬಿ ವಿ: 02.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.03955/2015.16; ದಿ: 09.02.16ರ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಬ್ಯಾಸಿಗಿದೇರಿ ಗ್ರಾಮದ ಸರ್ವೆ ನಂ.401/ಬಿ ವಿ:02.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.03955/2015.16; ದಿ:09.02.16ರ ಕ್ರಯ ಪತ್ರದ ಪ್ರಕಾರ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02ನೇ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-85/2015-16; ದಿ: .03.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-24.03.16 ರಿಂದ ದಿ:-28.07.2016ರ ವರೆಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು.

ವಿಚಾರಣೆಗೆ ಉಭಯರು ಹಾಜರಾಗಿರುತ್ತಾರೆ, ವಿಚಾರಣೆ ಸಮಯದಲ್ಲಿ ಕ್ರಯದಾರರಾದ ವಾದಿಯು ವಿವಾದಿತ ಜಮೀನನ್ನು ಜಮೀನಿನ ಪಟ್ಟಾದಾರರಾದ 01ನೇ ಪ್ರತಿವಾದಿಯಿಂದ ನೊಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಕ್ರಯಕ್ಕೆ ಹೊಂದಿದ್ದು ಕ್ರಯ ವ್ಯವಹಾರವು ಕಾನೂನುಬದ್ಧವಾಗಿರುತ್ತದೆ, ಈ ಬಗ್ಗೆ ತಕರಾರು ಸಲ್ಲಿಸಲು 02ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲಾ ಕಾರಣ ತಕರಾರನ್ನು ತಳ್ಳೀಹಾಕುತ್ತಾ ಕ್ರಯು ಪ್ರಕಾರ ಹಕ್ಕುಬದಲಾವಣೆಗೆ ಆದೇಶಿಸುವಂತೆ ವಿನಂತಿಸಿರುತ್ತಾರೆ.

ಈ ಬಗ್ಗೆ ತಕರಾರು ಸಲ್ಲಿಸಿರುವ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ ವಿವಾದಿತ ಜಮೀನಿನ ಹಕ್ಕುಬದಲಾವಣೆಗೆ ತಕರಾರನ್ನು ತನ್ನ ಕೌಟಂಬಿಕ ಸಮಸ್ಯೆಯ ಕಾರಣದಿಂದ ಕೊಟ್ಟಿದ್ದು ಈಗ ಕೌಟಂಬಿಕ ಸಮಸ್ಯೆ ವಿವಾದ ಬಗೆಹರಿಸಿಕೊಂಡಿದ್ದು ಕ್ರಯ ಪ್ರಕಾರ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು ಮೌಖಿಕ ಹೇಳಿಕೆ ನೀಡಿರುತ್ತಾರೆ. ಈ ಬಗ್ಗೆ ಜಮೀನಿನ ವಿಕ್ರಯದಾರರು ಸಹಾ ಹಕ್ಕುಬದಲಾವಣೆಗೆ ಸಮ್ಮತಿ ಸೂಚಿಸಿರುತ್ತಾರೆ.

ವಾದಿಯ ಕೋರಿಕೆ ಮತ್ತು ತಕರಾರುದಾರರ ಮೌಖಿಕ ಹೇಳಿಕೆಯನ್ವಯ ವಿವಾದಿತ ಜಮೀನಿನ ವಿವಾದದ ಕುರಿತು ದಾಖಲೆಗಳನ್ನು ಪರಿಶೀಲಿಸಲಾಗಿ, ವಿವಾದಿತ ಜಮೀನನ್ನು ವಾದಿಯು ಜಮೀನಿನ ಪಟ್ಟಾದಾರರಾದ 01ನೇ ಪ್ರತಿವಾದಿಯಿಂದ ಕ್ರಯಕ್ಕೆ ಹೊಂದಿರುವ ಕ್ರಯವ್ಯವಹಾರವು ಕಾನೂನುಬದ್ಧವಾಗಿರುತ್ತದೆ, ಹಾಗೂ ಈ ಬಗ್ಗೆ ವಿಕ್ರಯದಾರರು ಮತ್ತು ತಕರಾರುದಾರರು ಹಕ್ಕುಬದಲಾವಣೇಗೆ ಸಮ್ಮತಿ ನೀಡಿದ್ದು ತಕರಾರುದಾರರು ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿರುತ್ತಾರೆ. ಕಾರಣ ವಿವಾದಿತ ಜಮೀನಿನ ವಿವಾದದ ಕುರಿತು ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಬ್ಯಾಸಿಗಿದೇರಿ ಗ್ರಾಮದ ಸರ್ವೆ ನಂ.401/ಬಿ ವಿ:02.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.03955/2015.16; ದಿ:09.02.16ರ ಕ್ರಯ ಪತ್ರದ ಪ್ರಕಾರ ಕ್ರಯಕ್ಕೆ ಹೊಂದಿರುವ ಕ್ರಯದಾರರಾದ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:
ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.
ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.